# ಯುಪಿಐ ಪಾವತಿ ಮಿತಿ 5 ಲಕ್ಷಕ್ಕೆ ಏರಿಕೆ

■ ಶಶಿಕುಮಾರ್ ಸಿ.




ಏಕೀಕೃತ ಪಾವತಿ ವ್ಯವಸ್ಥೆ, ಎಂದರೆ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಬಳಕೆದಾರರಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಸಿಹಿ ಸುದ್ದಿ ನೀಡಿದ್ದು, ಯುಪಿಐ ಮೂಲಕ ತೆರಿಗೆ ಪಾವತಿಗೆ ಇದ್ದ ಮಿತಿಯನ್ನು 1 ಲಕ್ಷ ರೂಪಾಯಿಯಿಂದ 5 ಲಕ್ಷ ರೂಪಾಯಿಗೆ ಏರಿಕೆ ಮಾಡಿದೆ.

ಈಚೆಗೆ ಸುದ್ದಿಗೋಷ್ಠಿ ನಡೆಸಿದ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಈ ಬಗ್ಗೆ ಅಧಿಕೃತವಾಗಿ ಹೇಳಿದ್ದು, ಹೆಚ್ಚುವರಿ ನಿಬಂಧನೆಗಳ ಬಗ್ಗೆ ಶೀಘ್ರವೇ ತಿಳಿಸಲಾಗುವುದು ಎಂದಿದ್ದಾರೆ.

ಮಿತಿಯ ಹೆಚ್ಚಳವು ಗ್ರಾಹಕರಿಗೆ ಹೆಚ್ಚಿನ ಮೌಲ್ಯದ ತೆರಿಗೆ ವಹಿವಾಟುಗಳನ್ನು ಸರಳಗೊಳಿಸಲು ಮತ್ತು ಸುಗಮಗೊಳಿಸಲು ಅನುಕೂಲವಾಗಲಿದೆ. 'ಸದ್ಯಕ್ಕೆ ಯುಪಿಐ ಮೂಲಕ 1 ಲಕ್ಷ ರೂಪಾಯಿವರೆಗೆ ಹಣ ಕಳುಹಿಸಬಹುದು. ಇನ್ನು ಮುಂದೆ ತೆರಿಗೆ ಪಾವತಿಗಾಗಿ ಯುಪಿಐ ಮೂಲಕ 5 ಲಕ್ಷ ರೂಪಾಯಿವರೆಗೆ ಹಣ ಕಳುಹಿಸಬಹುದು. ಆ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಶೀಘ್ರವೇ ತಿಳಿಸಲಾಗುವುದು ಎಂದಿದ್ದಾರೆ ಅವರು.

'ಪ್ರಸ್ತುತ ಕೆಲವೊಂದು (ಉದಾಹರಣೆಗೆ ಆಸ್ಪತ್ರೆ, ಶಿಕ್ಷಣ ಸಂಸ್ಥೆ) ಕ್ಷೇತ್ರಗಳಿಗೆ ಹೊರತುಪಡಿಸಿ ಯುಪಿಐ ವಹಿವಾಟು 1 ಲಕ್ಷ ರೂಪಾಯಿಗೆ ಮಿತಿಯನ್ನು ವಿಧಿಸಲಾಗಿದೆ. ಇದೀಗ ಯುಪಿಐ ಮೂಲಕ ತೆರಿಗೆ ಪಾವತಿಯ ಮಿತಿಯನ್ನು ಪ್ರತಿ ವಹಿವಾಟಿಗೆ 5 ಲಕ್ಷ ರೂಪಾಯಿಗೆ ಹೆಚ್ಚಿಸಲು ನಿರ್ಧರಿಸಿದ್ದೇವೆ. ಇದರಿಂದ ಯುಪಿಐ ಬಳಸಿ ತೆರಿಗೆ ಪಾವತಿಸುವ ಗ್ರಾಹಕರಿಗೆ ಅನುಕೂಲವಾಗಲಿದೆ' ಎಂದು ವಿವರಿಸಿದ್ದಾರೆ.

### ಡೆಲಿಗೇಟೆಡ್ ಪೇಮೆಂಟ್ಸ್

ಮಿತಿ ಹೆಚ್ಚಿಸುವುದರ ಜೊತೆಗೆ ಆರ್‌ಬಿಐ 'ಡೆಲಿಗೇಟೆಡ್ ಪೇಮೆಂಟ್ಸ್' ಎಂಬ ಹೊಸ ಯುಪಿಐ ಫೀಚರ್ ಪರಿಚಯಿಸಿದೆ. ಒಬ್ಬ ವ್ಯಕ್ತಿಯ ಬ್ಯಾಂಕ್ ಖಾತೆಯನ್ನು ಮತ್ತೊಬ್ಬ ವ್ಯಕ್ತಿ ಬಳಸಲು ಅನುವು ಮಾಡಿಕೊಡುವ ಫೀಚರ್ ಇದಾಗಿದ್ದು, ಇದರಲ್ಲಿ ಪ್ರಾಥಮಿಕ ಬಳಕೆದಾರರ ಬ್ಯಾಂಕ್ ಖಾತೆಯಿಂದ ನಿರ್ದಿಷ್ಟ ಮಿತಿಯವರೆಗೆ ಯುಪಿಐ ವಹಿವಾಟುಗಳನ್ನು ನಡೆಸಲು ಮತ್ತೊಬ್ಬ ಬಳಕೆದಾರನಿಗೆ ಅನುಮತಿ ಒದಗಿಸಲಾಗಿದೆ. ಇದಕ್ಕಾಗಿ ದ್ವಿತೀಯ ಬಳಕೆದಾರರಿಗೆ ಪ್ರತ್ಯೇಕ ಯುಪಿಐ ಲಿಂಕ್ ಮಾಡಿದ ಬ್ಯಾಂಕ್ ಖಾತೆಯ ಅಗತ್ಯವಿಲ್ಲ. ಮೂಲ ಬಳಕೆದಾರರ ಯುಪಿಐ ಲಿಂಕ್ ಆಧರಿಸಿಯೇ ವಹಿವಾಟು ನಡೆಸಬಹುದು. ■

## ದುರ್ಬಳಕೆ ತಡೆಗೆ ಗೂಗಲ್ ಕ್ರಮ




ಟೆಕ್ ದೈತ್ಯ ಕಂಪನಿಯಾದ ಗೂಗಲ್‌ನ ಬಳಕೆದಾರರಿಗೆ ಕಂಪನಿಯು, ಬಳಕೆದಾರರ ವೈಯಕ್ತಿಕ ಮಾಹಿತಿ ದುರ್ಬಳಕೆಯಾಗದಂತೆ ತಡೆಯಲು ಹೊಸ ಕ್ರಮವೊಂದನ್ನು ಪರಿಚಯಿಸಿದೆ. ಈ ಕ್ರಮವನ್ನು ಎಲ್ಲರೂ ಅಳವಡಿಸಿಕೊಳ್ಳುವಂತೆ ಗೂಗಲ್ ಸೂಚಿಸಿದೆ.

ಗೂಗಲ್ ಬಳಕೆದಾರರು ತಮ್ಮ ಫೋಟೊ, ವಿಡಿಯೊ ಹಾಗೂ ವೈಯಕ್ತಿಕ ಮಾಹಿತಿಗಳನ್ನು ಗೂಗಲ್‌ನ ಇತರ ಪ್ಲಾಟ್‌ಫಾರ್ಮ್‌ಗಳಲ್ಲಿ ಒಂದಲ್ಲ ಒಂದು ಕಾರಣಕ್ಕೆ ಬಳಸಿರುತ್ತಾರೆ. ಅದು ಸುಲಭವಾಗಿ ಮತ್ತೊಬ್ಬರಿಗೆ ಸಿಗುತ್ತದೆ. ಇದನ್ನು ದುರ್ಬಳಕೆ ಮಾಡಿಕೊಳ್ಳುವ ಸೈಬರ್ ಕ್ರಿಮಿಗಳು ಅದರಿಂದ ಅನಾಹುತಗಳನ್ನು ಸೃಷ್ಟಿಸುತ್ತಾರೆ.

ವೈಯಕ್ತಿಕ ಫೋಟೊ, ವಿಡಿಯೊಗಳನ್ನು ಅಶ್ಲೀಲವಾಗಿ ಎಡಿಟ್ ಮಾಡುವುದು, ಲೈಂಗಿಕ ಸೈಟ್‌ಗಳಿಗೆ ನಿಮ್ಮ ಫೋಟೊಗಳನ್ನು ಬಳಸುವುದು ಸೇರಿದಂತೆ ನಾನಾ ರೀತಿಯಾಗಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ಇದರಿಂದ ಬಳಕೆದಾರರು ಖಿನ್ನತೆಗೆ ಒಳಗಾಗುತ್ತಿದ್ದಾರೆ. ಅನೇಕರು ಪ್ರಾಣ ಬಿಡುತ್ತಿದ್ದಾರೆ. ಹೀಗಾಗದಂತೆ ಕ್ರಮ ತೆಗೆದುಕೊಳ್ಳುವ ನಿಟ್ಟಿನಲ್ಲಿ ಗೂಗಲ್‌ನ ಹೊಸ ಕ್ರಮ ಬಹೂಪಯೋಗಿ.

ಗೂಗಲ್‌ನ ಹೊಸ ಅಪ್‌ಡೇಟ್‌ನಿಂದ ಬಳಕೆದಾರರ ವೈಯಕ್ತಿಕ ಮಾಹಿತಿ, ಫೋಟೊ, ವಿಡಿಯೊಗಳನ್ನು ಸರ್ಚ್ ಎಂಜಿನ್ ನಿಂದ ತೆಗೆದು ಹಾಕುವುದರ ಜೊತೆಗೆ ದುರ್ಬಳಕೆಯಾಗದಂತೆ ತಡೆಯುತ್ತದೆ.

### ದುರ್ಬಳಕೆ ತಡೆ ಹೇಗೆ?

- https://support.google.com/websearch/contact/content_removal_form?sjid=1ಗೆ ಹೋಗಿ
- ಈ ಪುಟದಲ್ಲಿ, 'Google ಹುಡುಕಾಟದಿಂದ ವೈಯಕ್ತಿಕ ವಿಷಯ ತೆಗೆದುಹಾಕಲು ನೀವು ಏಕೆ ವಿನಂತಿಸುತ್ತಿರುವಿರಿ' ಎಂಬ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಸಕಾರಣ ನೀಡಿ. ನಿಮ್ಮ ವಿಳಾಸ ನಮೂದಿಸಿ.
- ನಂತರ 'ಮುಂದೆ' ಆಯ್ಕೆ ಕ್ಲಿಕ್ ಮಾಡಿ.
- ನೀವು ವೈಯಕ್ತಿಕ ಮಾಹಿತಿಯನ್ನು ತೆಗೆದುಹಾಕುವುದನ್ನು ಆಯ್ಕೆ ಮಾಡಿದ ನಂತರ ಮುಂದಿನ ಪುಟದಲ್ಲಿ Google ಹುಡುಕಾಟ ಫಲಿತಾಂಶಗಳಿಂದ ನೀವು ತೆಗೆದುಹಾಕಲು ಬಯಸುವ ವೈಯಕ್ತಿಕ ಮಾಹಿತಿಯನ್ನು ಆಯ್ಕೆಮಾಡಿ.
- ಹುಡುಕಾಟ ಪದ, ಪುಟ URL, Google ಹುಡುಕಾಟ ಫಲಿತಾಂಶ URL ಮತ್ತು ಇತರ ಸಂಬಂಧಿತ ಮಾಹಿತಿಯಂತಹ ಅಗತ್ಯವಿರುವ ಎಲ್ಲಾ ಡೇಟಾವನ್ನು ನಮೂದಿಸಿ.
- ಮುಂದಿನ ಪುಟದಲ್ಲಿ, ವೈಯಕ್ತಿಕ ವಿವರಗಳಿಗಾಗಿ ನಮೂದಿಸಿ, ಒಕೆ ಆಯ್ಕೆಯನ್ನು ಕ್ಲಿಕ್ ಮಾಡಿ. ■